ಅ) ತರೀಕೆರೆ ತಾಲ್ಲೂಕಿನ ಕುಸ್ತಿಪಟುಗಳಿಗೆ ಪ್ರೋತ್ಸಾಹನ ನೀಡಿದ್ದೀರಾ ಹಾಗಿದ್ದಲ್ಲಿ ಎಷ್ಟು ಜನರಿಗೆ ಕೊಟ್ಟಿದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು)-

ಅ) ನೀಡಿಲ್ಲ.

ಆ) ಇದುವರೆವಿಗೂ ತರೀಕೆರೆ ತಾಲ್ಲೂಕಿನ ಒಬ್ಬರು ಕುಸ್ತಿಪಟುವಿಗೆ ಪ್ರೋತ್ಸಾಹನ ಮಂಜೂರಾತಿ ನೀಡಲಾಗಿದೆ. ಇನ್ನು ಉಳಿದ ಕುಸ್ತಿಪಟುಗಳ ಬೇಡಿಕೆ ಪರಿಶೀಲನೆಯಲ್ಲಿದೆ.

೧೯೮೮-೮೯ನೇ ಸಾಲಿನಲ್ಲಿ ಆಂಗನವಾಡಿ ಶಿಶುವಿಹಾರಗಳನ್ನು ಪ್ರಾರಂಭಿಸುವ ಬಗ್ಗೆ

೨೯೭೦. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).-ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೮-೮೯ನೇ ಸಾಲಿನಲ್ಲಿ ಎಷ್ಟು ಆಂಗನವಾಡಿ ಶಿಶುವಿಹಾರಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ಯೋಜನೆಯನ್ನು ರೂಪಿಸಿ ಕಳುಹಿಸಲಾಗಿದೆ ?

ಆ) ಹಾಗಿದ್ದಲ್ಲಿ ಸೂಚಿಸಿರುವ ಸ್ಥಳ ಹಾಗೂ ಯಾವ ತಾಲ್ಲೂಕುಗಳಲ್ಲಿ ಎಂಬುದನ್ನು ತಿಳಿಸುವುದೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ೧೪ ಆಂಗನವಾಡಿ ಶಿಶುವಿಹಾರಗಳನ್ನು ಪ್ರಾರಂಭಿಸಲು ಕಳುಹಿಸಲಾಗಿತ್ತು.

ಆ) ಶಿಫಾರಸ್ಸು ಮಾಡಿದ್ದ ಸ್ಥಳ ಮತ್ತು ತಾಲ್ಲೂಕು ಈ ಕೆಳಕಂಡಂತಿದೆ.—

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು ಮತ್ತು ಸ್ಥಳ
೧	ಬೆಂಗಳೂರು ಗ್ರಾಮಾಂತರ	ಬೆಂಗಳೂರು ಉತ್ತರ
೨	ಚಿತ್ರದುರ್ಗ	ಮೊಣಕಾಲ್ಮೂರು
೩	ಕೋಲಾರ	ಶ್ರೀನಿವಾಸಪುರ
೪	ಧಾರವಾಡ	ಬ್ಯಾಡಗಿ
೫	ಬೆಳಗಾಂ	ಚಿಕ್ಕೋಡಿ
೬	ಬಿಜಾಪುರ	ಬಿಜಾಪುರ ನಗರ
೭	ಉತ್ತರ ಕನ್ನಡ	ಹಳಿಯಾಲ
೮	ಮೈಸೂರು	ಚಾಮರಾಜನಗರ
೯	ಚಿಕ್ಕಮಗಳೂರು	ತರೀಕೆರೆ
೧೦	ಶಿವಮೊಗ್ಗ	ಶಿಕಾರಿಪುರ
೧೧	ಗುಲ್ಬರ್ಗ	ಶಹಾಪುರ
೧೨	ರಾಯಚೂರು	ಮಾನ್ವಿ
೧೩	ಬಳ್ಳಾರಿ	ಹೂವಿನ ಹಡಗಲಿ
೧೪	ತುಮಕೂರು	ಚಿಕ್ಕನಾಯಕನಹಳ್ಳಿ